ಕರ್ನಾಟಕ ವಿವಿ 70 ಮತ್ತು 71ನೇ ಘಟಿಕೋತ್ಸವ | ವಿಟಿಯು ಕುಲಪತಿ ಪ್ರೊ. ಕರಿಸಿದ್ದಪ್ಪ ಆಶಯ

ಸಮಾಜ ಸುಧಾರಣೆಗೆ ಶಿಕ್ಷಣ ಅಸ್ತ್ರವಾಗಲಿ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಶಿಕ್ಷಣ ನಿರಂತರ ಪ್ರಕ್ರಿಯೆ ಆಗಿದ್ದು, ಜೀವನದುದ್ದಕ್ಕೂ ಕಲಿಕೆ ನಿರಂತರವಾಗಿರಬೇಕು ಎಂದು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕರಿಸಿದ್ದಪ್ಪ ಹೇಳಿದರು.

ನಗರದ ಗೋಲ್ಡನ್ ಜುಬಿಲಿ ಸಭಾಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ 70 ಮತ್ತು 71ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪಿಎಚ್.ಡಿ ಪದವಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿಜಯವಾಣಿ ಚಿತ್ರ

ಧಾರವಾಡದ ಕವಿವಿ ಗೋಲ್ಡನ್ ಜುಬಿಲಿ ಸಭಾಭವನದಲ್ಲಿ ಆಯೋಜಿಸಿದ್ದ 70 ಮತ್ತು 71ನೇ ವಾರ್ಷಿಕ ಘಟಿಕೋತ್ಸವದಲ್ಲಿ ಹುಬ್ಬಳ್ಳಿಯ ಕೆಎಲ್‌ಇ ತಾಂತ್ರಿಕ ಮಹಾವಿದ್ಯಾಲಯದ ಸಂಶೋಧನಾ ನಿರ್ದೇಶಕ ಪ್ರೊ. ತೇಜರಾಜ ಮಲ್ಲೇಶಪ್ಪ ಅಮ್ಮಿನಭಾವಿ ಅವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕರಿಸಿದ್ದಪ್ಪ ಅವರು 'ವಜ್ರ ಮಹೋತ್ಸವ ಪ್ರಾಧ್ಯಾಪಕ' (ಜೀವಮಾನ ಪ್ರಾಧ್ಯಾಪಕ) ಪ್ರಶಸ್ತಿ ಪ್ರದಾನ ಮಾಡಿದರು. ಪ್ರೊ. ಕೆ.ಬಿ. ಗುಡಸಿ, ಪ್ರೊ. ನಾಗರಾಜ, ಡಾ. ಕೆ.ಟಿ. ಹನುಮಂತಪ್ಪ, ಇತರರಿದ್ದರು.

Vencobb
ಧಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹
ವಿಥ್ ಸ್ಕಿನ್ ₹ | ವಿಥೌಟ್ ಸ್ಕಿನ್ ₹
ಗ್ರಾಹಕರಿಗೋಸ್ಕರ ನೀಡಲಾಗಿದೆ

ಪ್ರಸ್ತುತ ಶೈಕ್ಷಣಿಕ ವಲಯದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ (ರಾಶಿ) ನೀತಿಯಿಂದ ಅನೇಕ ಬದಲಾವಣೆಗಳಾಗಲಿವೆ. ಸಮಾಜದಲ್ಲಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶಿಕ್ಷಣ ಅಸ್ತ್ರವನ್ನಾಗಿ ಬಳಕೆ ಮಾಡಬಹುದು. ಪದವಿಯ ಜ್ಞಾನ ಉನ್ನತ ಮಟ್ಟದ್ದಾಗಿರಬೇಕು. ಶಿಕ್ಷಣ ಸಮಾಜದ ಒಳಿತಿಗಾಗಿ ಬಳಕೆಯಾಗಬೇಕು. ಶಿಕ್ಷಕ ವೃತ್ತಿ ಗೌರವಯುತವಾದುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ ಮಾತನಾಡಿ, ಶಿಕ್ಷಣ ನಮ್ಮ ಆತ್ಮವಿಶ್ವಾಸ ಹೆಚ್ಚಿಸಬೇಕು. ಪದವಿ ಮತ್ತು ಡಾಕ್ಟರೇಟ್ ಪಡೆದವರು ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂದರು.

ವಜ್ರ ಮಹೋತ್ಸವ ಪ್ರಾಧ್ಯಾಪಕ

ಹುಬ್ಬಳ್ಳಿಯ ಕೆಎಲ್‌ಇ ತಾಂತ್ರಿಕ ಮಹಾವಿದ್ಯಾಲಯದ ಸಂಶೋಧನಾ ನಿರ್ದೇಶಕ ಪ್ರೊ. ತೇಜರಾಜ ಮಲ್ಲೇಶಪ್ಪ ಅಮ್ಮಿನಭಾವಿ ಅವರಿಗೆ ಕವಿವಿ ಘಟಿಕೋತ್ಸವದಲ್ಲಿ 'ವಜ್ರ ಮಹೋತ್ಸವ ಪ್ರಾಧ್ಯಾಪಕ' (ಜೀವಮಾನ ಪ್ರಾಧ್ಯಾಪಕ) ಪ್ರಶಸ್ತಿ ಪ್ರದಾನ ಮಾಡಲಾಯಿತು.

kannada matrimony
ವಧು ಅಥವಾ ವರರನ್ನು ಹುಡುಕಲು ಸಹಾಯ ಬೇಕೆ?
ನಮಗೆ ಕರೆ ಮಾಡಿ 70928 77888
ನೋಂದಣಿ ಉಚಿತ!

ವಿವಿಧ ವಿಷಯಗಳಲ್ಲಿ ಸಂಶೋಧನೆಗೈದ 311 ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ಕುಲಸಚಿವರಾದ ಡಾ. ಕೆ.ಟಿ. ಹನುಮಂತಪ್ಪ, ಪ್ರೊ.ಎಚ್. ನಾಗರಾಜ್, ಸಿಂಡಿಕೇಟ್ ಸದಸ್ಯರು, ವಿದ್ಯಾ ವಿಷಯಕ್ ಪರಿಷತ್‌ನ ಸದಸ್ಯರು, ವಿವಿಧ ನಿಕಾಯಗಳ ದೀನರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಪಾಲಕರು ಉಪಸ್ಥಿತರಿದ್ದರು.

ಮೃತ ತಂದೆಯ ಡಾಕ್ಟರೇಟ್ ಸ್ವೀಕರಿಸಿದ ಪುತ್ರ

ತಂದೆ ಮೃತಪಟ್ಟಿದ್ದರಿಂದ ಅವರ ಪುತ್ರ ಡಾಕ್ಟರೇಟ್ ಸ್ವೀಕರಿಸಿದ ಅಪರೂಪದ ಪ್ರಸಂಗ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ನಡೆಯಿತು.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಅಲೂರ ಗ್ರಾಮದ ರಾಘವೇಂದ್ರ ಗೂಳಿ ಅವರು ಶಿಕ್ಷಣ ವಿಷಯದಲ್ಲಿ ಪಿಎಚ್.ಡಿ ಪೂರೈಸಿದ್ದರು. ಅವರು ಡಾಕ್ಟರೇಟ್ ಪದವಿ ಸ್ವೀಕರಿಸುವ ಮೊದಲೇ ಕರೊನಾ ಮೊದಲ ಅಲೆಯಿಂದಾಗಿ ಮೃತಪಟ್ಟಿದ್ದರು. ಹೀಗಾಗಿ ಅವರ 10 ವರ್ಷದ ಪುತ್ರ ಮಲ್ಲಿಕಾರ್ಜುನ ಗೂಳಿ ವೇದಿಕೆಗೆ ತೆರಳಿ ತಂದೆಯ ಡಾಕ್ಟರೇಟ್ ಪದವಿ ಸ್ವೀಕರಿಸಿದನು. ಸಾಲ್ವತ್ತವಾಡದ ವೀರೇಶ್ವರ ಬಿ.ಎಡ್. ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ರಾಘವೇಂದ್ರ ಗೂಳಿ, ಗ್ರಾಮೀಣ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರಮಿಸಿದ್ದರು. ಜ್ಞಾನ ಕಣಜ ಎಂಬ ಕಿರಿಯ ಪ್ರಾಥಮಿಕ ಶಾಲೆಯನ್ನೂ ಅವರು ತೆರೆದಿದ್ದರು. ರಾಘವೇಂದ್ರ ಸ್ಮರಣಾರ್ಥ ಕುಟುಂಬದವರು ಪ್ರಸಕ್ತ ವರ್ಷ 1ರಿಂದ 6ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದಾರೆ.

ಮೃತ ತಂದೆಯ ಪಿಎಚ್.ಡಿ ಸ್ವೀಕರಿಸಿದ ಪುತ್ರ ಮಲ್ಲಿಕಾರ್ಜುನ ಗೂಳಿ.

ಐಸಿಎಫ್‌ಎಐಗೆ ಲೀಡರ್‌ಶಿಪ್ ಲೆಗಸಿ ಅವಾರ್ಡ್

ಬೆಂಗಳೂರು: ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಾಗಿ ಐಸಿಎಫ್‌ಎಐ ಫೌಂಡೇಷನ್ ಗೆ 'ಲೀಡರ್‌ಶಿಪ್ ಲೆಗಸಿ ಅವಾರ್ಡ್ ಇನ್ ಹೈಯರ್ ಎಜುಕೇಷನ್' ಎಂಬ ಪ್ರಶಸ್ತಿ ಸಿಕ್ಕಿದೆ.

ಈ ಪ್ರಶಸ್ತಿಯನ್ನು ಎಲೆಟ್ಸ್ ಟೆಕ್ನೋ ಮೀಡಿಯಾ ಪ್ರೈ.ಲಿ. ಇತ್ತೀಚೆಗೆ ನಡೆದ ಎಜುಕೇಷನ್ ಸಮಿಟ್‌ನಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಈ ಪ್ರಶಸ್ತಿಯನ್ನು ಫೌಂಡೇಷನ್‌ನ ಸಂಸ್ಥಾಪಕರಾಗಿದ್ದ ಡಿ.ಎನ್. ಜೈಯಶ್ವಿಗೆ ಅರ್ಪಣೆ ಮಾಡಿದ್ದಾರೆ. ವಿಶ್ವದರ್ಜೆಯ ಸಂಸ್ಥೆ ನಿರ್ಮಾಣ ಮಾಡುವಲ್ಲಿ ಯಶಸ್ವಿ ಅವರ ಪಾತ್ರ ಅಪಾರವಾಗಿದೆ. ಮೂರು ದಶಕಗಳಲ್ಲಿ ಐಸಿಎಫ್‌ಎಐ 11 ವಿಶ್ವವಿದ್ಯಾಲಯಗಳು, 9 ಬಿಸಿನೆಸ್ ಸ್ಕೂಲ್, 7 ಟೆಕ್ನೋ ಸ್ಕೂಲ್, 7 ಲಾ ಸ್ಕೂಲ್ ತೆರೆದಿದೆ. 16 ರಾಜ್ಯಗಳಲ್ಲಿ 17 ಕ್ಯಾಂಪಸ್‌ಗಳನ್ನು ಹೊಂದಿದೆ. ಶೈಕ್ಷಣಿಕ ಗುಣಮಟ್ಟವನ್ನು ಹೊಂದುವ ಮೂಲಕ ಸಮಾಜಕ್ಕೆ ಉತ್ತಮ ಪದವೀಧರರನ್ನು

ನೀಡುತ್ತಿರುವುದನ್ನು ಗಮನಿಸಿ ಈ ಪ್ರಶಸ್ತಿ ನೀಡಿದೆ. ಇದಕ್ಕೆ ಸಹಕಾರ ನೀಡಿದ ಎಲ್ಲ ಐಸಿಎಫ್‌ಎಐ ವಿದ್ಯಾರ್ಥಿಗಳು, ಹಳೇ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರರ ವರ್ಗದವರಿಗೆ ಐಸಿಎಫ್‌ಎಐ ಅಭಿನಂದನೆ ತಿಳಿಸಿದೆ.

ಎಐಸಿಟಿಇ ಅಧ್ಯಕ್ಷ ಡಾ.ಅನಿಲ್ ಸಹಸ್ರಬುದ್ಧೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪ್ರಶಸ್ತಿಯನ್ನು ನೀಡಿದ್ದಾರೆ. ಐಸಿಎಫ್‌ಎಐನ ಕುಲಪತಿ, ಅಧ್ಯಕ್ಷರು ಇತರರು ಭಾಗವಹಿಸಿದ್ದರು.

ಉದ್ಯೋಗಕ್ಕೆ ಸೇರಿದರೂ ನಿಲ್ಲದಿರಲಿ ಕಲಿಕೆ

ಕವಿವಿ ವರ್ಚುವಲ್ ಘಟಿಕೋತ್ಸವದಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಪ್ರೊ. ಕಿರಣಕುಮಾರ ಸಂದೇಶ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಜೀವನದ ಎಲ್ಲ ಹಂತಗಳಲ್ಲಿ ಯಶಸ್ಸು ಸಾಧಿಸಲು ಜ್ಞಾನವು ನಮಗೆ ಸಾಮರ್ಥ್ಯ ಮತ್ತು ಆತ್ಮವಿಶ್ವಾಸ ನೀಡುತ್ತದೆ. ಶಿಕ್ಷಣ ವ್ಯವಸ್ಥಿತ ರೀತಿಯ ಜ್ಞಾನ ಗಳಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಒಬ್ಬ ವ್ಯಕ್ತಿ ಶಿಕ್ಷಣದ ಮೂಲಕ ಸೃಜನಶೀಲ ಚಿಂತನೆ, ಜ್ಞಾನ ಮತ್ತು ತಾರ್ಕಿಕ ಶಕ್ತಿ ಹೊಂದಿದವನಾಗುತ್ತಾನೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಪ್ರೊ. ಎ.ಎಸ್. ಕಿರಣಕುಮಾರ ಹೇಳಿದರು.

ಪ್ರೊ. ಕಿರಣಕುಮಾರ

ಕರೊನಾ ಕಾರಣದಿಂದಾಗಿ ಇದೇ ಪ್ರಥಮ ಬಾರಿಗೆ ವರ್ಚುವಲ್ ವೇದಿಕೆ ಮೂಲಕ ರಾಜ್ಯಪಾಲ ಥಾವರಚಂದ್ ಗೆಹಲೋಟ್ ಅಧ್ಯಕ್ಷತೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಕವಿವಿ 70, 71ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಅತಿಥಿಯಾಗಿ ಪಾಲ್ಗೊಂಡು (ಮುದ್ರಿತ ವೀಡಿಯೋ ಮೂಲಕ) ಅವರು ಸಂದೇಶ ನೀಡಿದರು.

ವಿದ್ಯಾರ್ಥಿಗಳು ಶೈಕ್ಷಣಿಕ ಜೀವನದ ಒಂದು ಮೈಲಿಗಲ್ಲು ತಲುಪಿದ್ದರೂ ಮತ್ತೆ ಉನ್ನತ ಶೈಕ್ಷಣಿಕ ಅರ್ಹತೆ ಪಡೆಯಲು, ಉದ್ಯೋಗಕ್ಕೆ ಸೇರಲು, ಸ್ವಂತ ಉದ್ಯಮ ಹೊಂದಲು ಇಚ್ಛಿಸಿದ್ದರೂ ಕಲಿಕೆ ಎನ್ನುವುದು ಕೊನೆಗೊಳ್ಳುವುದಿಲ್ಲ. ಜ್ಞಾನ ಸಾಮರ್ಥ್ಯ, ಓದುವ ಹವ್ಯಾಸ, ಸೃಜನಶೀಲ ಚಿಂತನಾ ಸಾಮರ್ಥ್ಯ ಪಡೆದುಕೊಳ್ಳುವತ್ತ ವಿದ್ಯಾರ್ಥಿಗಳು ತೆಗೆದುಕೊಳ್ಳುವ ನಿಲುವಿನ ಮೇಲೆ ಕಲಿಕೆಯ ನಿರಂತರತೆ ಅವಲಂಬಿತವಾಗಿರುತ್ತದೆ. ಈ ಮೂಲಕ ಸ್ವಧಾರ್ಮಿಕತೆಗೆ ಹಾಗೂ ಹೊಸ ಬದಲಾವಣೆಯಿಗಾಗಿಗೆ ಸಜ್ಜುಗೊಳ್ಳಬೇಕು. ಕೆಲಸಕ್ಕೆ ಸೇರಿದರೂ ಕಲಿಕೆ ನಿಲ್ಲಿಸದಿರಿ ಎಂದು ಸಲಹೆ ನೀಡಿದರು.

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ರಾಜ್ಯದ ಹೆಮ್ಮೆಯ ಧಾರವಾಡ ನಗರ ಪುಣ್ಯಭೂಮಿಯಾಗಿದ್ದು, ವಿದ್ಯಾಕಾಶಿ ಎಂದು ಹೆಸರುವಾಸಿಯಾಗಿದೆ. ಕವಿಗಳ ನೆಲೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ನೆಲೆ, ಸಂಗೀತದ ನೆಲೆ, ವಿದ್ವಾಂಸರು ಜನ್ಮತಾಳಿದ ಭೂಮಿ. ಕವಿವಿಯು ಶಿಕ್ಷಣ ಕ್ಷೇತ್ರಕ್ಕೆ ಬಹಳ ದೊಡ್ಡ ಕೊಡುಗೆ ನೀಡಿದೆ ಎಂದರು.

ಪದವಿ ಪಡೆದ ವಿದ್ಯಾರ್ಥಿಗಳು ದೊಡ್ಡ ಜವಾಬ್ದಾರಿ ಹೊತ್ತು ಸ್ವತಂತ್ರವಾಗಿ ಬದುಕಿ ಬಾಳುವ ದಿನಗಳು ಇನ್ನು ಆರಂಭವಾಗಲಿದೆ. ಹೀಗಾಗಿ ಜವಾಬ್ದಾರಿಯುತ ಹೆಜ್ಜೆಗಳನ್ನು ಇಡಬೇಕು. ಈ ಸಂದರ್ಭದಲ್ಲಿ ಸವಾಲು, ಸಮಸ್ಯೆಗಳು ಸಾಮಾನ್ಯ. ಅವೆಲ್ಲವುಗಳನ್ನು ಎದೆಗುಂದದೆ ಮೆಟ್ಟಿ ನಿಲ್ಲಬೇಕು. ಸಮಸ್ಯೆಗಳಿಂದ ನೀವು ನೆಗೆಟಿವ್ ಪರ್ಸನ್ ಆಗದೆ ಪಾಸಿಟಿವ್ ಆಗಿ ಮುಂದೆ ಸಾಗಬೇಕು. ದೇಶ ವಿಶ್ವದ ಜತೆಗೆ ಸ್ಪರ್ಧೆ ಮಾಡುತ್ತಿದೆ. ನಾವು ಬೇರೆಯವರಿಗಿಂತ ಯಾವುದರಲ್ಲೂ ಕಮ್ಮಿ ಇಲ್ಲ. ಗುಣಮಟ್ಟದಲ್ಲಿ ನಾವೇ ಉತ್ತಮ ಎಂಬ ಕಲ್ಪನೆ, ಯೋಚನೆ, ಬದ್ಧತೆ ಇಟ್ಟುಕೊಂಡು ಮುನ್ನಡೆಯಬೇಕು ಎಂದರು.

ಕುಲಪತಿ ಪ್ರೊ. ಕೆ.ಬಿ. ಗುಡಸಿ স্বাগತಿಸಿ, ವಿವಿಯ ಸಾಧನೆ ಪ್ರಸ್ತುತಪಡಿಸಿದರು. ಕುಲಸಚಿವರಾದ ಡಾ. ಹನುಮಂತಪ್ಪ ಕೆ.ಟಿ., ಡಾ. ಎಚ್. ನಾಗರಾಜ, ವಿವಿಧ ವಿಭಾಗಗಳ ಮುಖ್ಯಸ್ಥರು, ಇತರರು ಇದ್ದರು.

ಪದಕ ಪ್ರದಾನ ಇಂದು

ಘಟಿಕೋತ್ಸವದ 2ನೇ ದಿನವಾದ ಶನಿವಾರ ಬೆಳಗ್ಗೆ 10.30ಕ್ಕೆ ಕವಿವಿ ಗೋಲ್ಡನ್ ಜುಬಿಲಿ ಹಾಲ್‌ನಲ್ಲಿ ಬಂಗಾರದ ಪದಕ ವಿತರಣೆ ನಡೆಯಲಿದೆ. ಈ ಸಮಾರಂಭದಲ್ಲಿ ಒಟ್ಟು 451 ವಿದ್ಯಾರ್ಥಿಗಳು ಬಂಗಾರದ ಪದಕ ಪಡೆಯಲಿದ್ದು, ಆ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡಲಾಗುವುದು. ವಿದ್ಯಾರ್ಥಿಗಳು ಅರ್ಧ ಗಂಟೆ ಮುಂಚಿತವಾಗಿ ಬಂದು, ಗುರುತಿನ ಚೀಟಿ ತೋರಿಸಿ ಪ್ರವೇಶ ಪಡೆಯಬೇಕು.

ಮುದ್ರಿತ ವಿಡಿಯೋಗಳ ಪ್ರಸಾರ

ರಾಜ್ಯಪಾಲ ಥಾವರಚಂದ್ ಗೆಹಲೋಟ್ ಆದೇಶಗಳು, ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಹಾಗೂ ಮುಖ್ಯ ಅತಿಥಿ ಪ್ರೊ. ಎ.ಎಸ್. ಕಿರಣಕುಮಾರ ಭಾಷಣದ ಚಿತ್ರೀಕರಣವನ್ನು ಮೊದಲೇ ಮಾಡಲಾಗಿತ್ತು. ಕುಲಪತಿ ಪ್ರೊ. ಕೆ.ಬಿ. ಗುಡಸಿ ಸ್ವಾಗತ ಭಾಷಣ, ವಿವಿಧ ವಿಭಾಗಗಳ ಡೀನ್‌ಗಳು ಅಯಾ ವಿಭಾಗದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳ ಮಾಹಿತಿ ತಿಳಿಸುವುದನ್ನು ಸಹ ವಿಡಿಯೋ ಮಾಡಲಾಗಿತ್ತು. ಕವಿವಿ ಲಿಂಕ್ ಮೂಲಕ ಲೈವ್ ಸ್ಟ್ರೀಮ್‌ನಲ್ಲಿ ಶುಕ್ರವಾರ ವಿಡಿಯೋಗಳನ್ನು ಪ್ರಸಾರ ಮಾಡಲಾಯಿತು. ವಿವಿ ಸಿಬ್ಬಂದಿ ಹಾಗೂ ಮಾಧ್ಯಮದವರು ವೀಕ್ಷಿಸಲು ಗೋಲ್ಡನ್ ಜುಬಿಲಿ ಹಾಲ್‌ನಲ್ಲಿ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಶಿಷ್ಯವೇತನ ವಿತರಣೆ

ಘಟಿಕೋತ್ಸವದಲ್ಲಿ 8733 ವಿದ್ಯಾರ್ಥಿಗಳು (70ನೇ ಘಟಿಕೋತ್ಸವ 4165, 71ನೇ ಘಟಿಕೋತ್ಸವ 4568) ಸ್ನಾತಕೋತ್ತರ ಪದವಿ, 31694 ವಿದ್ಯಾರ್ಥಿಗಳು (15084, 16610) ಸ್ನಾತಕ ಪದವಿ ಪಡೆದರು. 146 ರ್‍ಯಾಂಕ್ ವಿಜೇತರು (71, 75), 81 ವಿದ್ಯಾರ್ಥಿಗಳಿಗೆ (41, 40), 147 ವಿದ್ಯಾರ್ಥಿಗಳಿಗೆ (74, 73) ಶಿಷ್ಯವೇತನ ಪ್ರದಾನ ಮಾಡಲಾಯಿತು.

ಉಚಿತ ಆರೋಗ್ಯ ಶಿಬಿರ ನಾಡಿದ್ದು

ಹುಬ್ಬಳ್ಳಿ: ಹಳೇಹುಬ್ಬಳ್ಳಿ ಹೆಗ್ಗೇರಿ ಆಯುರ್ವೇದ ಮಹಾವಿದ್ಯಾಲಯದ ಕಾಯಚಿಕಿತ್ಸಾ ವಿಭಾಗ ಹಾಗೂ ಝುಂಡು ಫಾರ್ಮಾಸ್ಯೂಟಿಕಲ್ಸ್ (ಇಮಾಮಿ ಸಮೂಹ) ಸಹಯೋಗದಲ್ಲಿ ಅ. 11ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಎಲುಬು ಸಾಂದ್ರತೆ ತಪಾಸಣೆ ಹಾಗೂ ವಿಶೇಷ ಆಯುರ್ವೇದ ತಪಾಸಣೆ ಶಿಬಿರ ಏರ್ಪಾಟಾಗಿದೆ. ಬೆನ್ನು ನೋವು, ಸಂಧಿನೋವು, ಕೀಲುನೋವು ಮುಂತಾದ ಸಮಸ್ಯೆಗಳಿಗೆ ಕಾರಣ ತಿಳಿದುಕೊಳ್ಳಲು ಎಲುಬು ಸಾಂದ್ರತೆ ಪರೀಕ್ಷೆ ಅಗತ್ಯವಾಗಿದ್ದು, ಸಾರ್ವಜನಿಕರು ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕೆಂದು ಪ್ರಾಚಾರ್ಯ ಡಾ. ಪ್ರಶಾಂತ ಎ.ಎಸ್. ಕೋರಿದ್ದಾರೆ.

ನವೋದಯ ವಿದ್ಯಾಲಯಕ್ಕೆ ಆಯ್ಕೆ

ಕಲಘಟಗಿ: ಪಟ್ಟಣದ ಜ್ಞಾನಜ್ಯೋತಿ ವಿದ್ಯಾಲಯದ ವಿದ್ಯಾರ್ಥಿನಿ ಅರ್ಪಿತಾ ಹಿರೇಮಠ ಜವಾಹರ ನವೋದಯ ವಿದ್ಯಾಲಯಕ್ಕೆ ಆಯ್ಕೆಯಾಗಿದ್ದಾಳೆ.

ಅರ್ಪಿತಾ ಹಿರೇಮಠ

ಆರು ಪ್ರಕರಣ ದಾಖಲು

ಧಾರವಾಡ: ಜಿಲ್ಲೆಯಲ್ಲಿ ಶುಕ್ರವಾರ 6 ಕೋವಿಡ್ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿದ್ದು, 3 ಜನರು ಗುಣವಾಗಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ. 44 ಸಕ್ರಿಯ ಪ್ರಕರಣಗಳಿವೆ. ಕೋವಿಡ್‌ನಿಂದ ಈವರೆಗೆ 1305 ಜನರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ಚಾಣಕ್ಯ ಕರಿಯರ್ ಅಕಾಡೆಮಿ ವಿಜಯಪುರ
(IAS & KAS ತರಬೇತಿ ಕೇಂದ್ರ)
KAS PSI
51ನೇ ಬ್ಯಾಚ್
ಪ್ರವೇಶ ಪ್ರಾರಂಭ: 01-10-2021
ತರಗತಿ ಪ್ರಾರಂಭ: 10-10-2021
ಉಚಿತ ಪ್ರವೇಶ
ಪೂರ್ಣ ಅಂಗವಿಕಲರಿಗೆ, ಮಾಜಿ ಸೈನಿಕರಿಗೆ, ವಿಧವೆಯರಿಗೆ, ದೇವದಾಸಿ ಮಕ್ಕಳಿಗೆ
6 ರಿಂದ 8ನೇ ತರಗತಿ ಶಿಕ್ಷಕರ ನೇಮಕಾತಿ
CET ONLINE 2ನೇ ಬ್ಯಾಚ್
ಪ್ರಾರಂಭವಾಗಿದೆ. ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳಬಹುದು.
ಮಲಭಾಗ ಬಿಲ್ಡಿಂಗ್, ಮೀನಾಕ್ಷಿ ಚೌಕ, ವಿಜಯಪುರ
☎: 08352-222197, 240197
Cell : 9448179762, 9900056218

ವಿಜಯವಾಣಿ ಕ್ಲಬ್‌ಹೌಸ್‌ನಲ್ಲಿ ಇಂದು ಡಾ.ವೀರೇಂದ್ರ ಹೆಗ್ಗಡೆ

ಮಂಗಳೂರು: ಶ್ರೀಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಇದೇ ಮೊದಲ ಬಾರಿಗೆ ಕ್ಲಬ್ ಹೌಸ್‌ನಲ್ಲಿ ಭಾಗವಹಿಸುತ್ತಿದ್ದಾರೆ. 'ವಿಜಯವಾಣಿ-ದಿಗ್ವಿಜಯ ಕ್ಲಬ್‌ಹೌಸ್'ನಲ್ಲಿ ಶನಿವಾರ ಸಾಯಂಕಾಲ 6 ಗಂಟೆಗೆ ಆರಂಭವಾಗುವ ಸಂವಾದದಲ್ಲಿ ಧರ್ಮಸ್ಥಳದ ಸಮಾಜಮುಖಿ ಕಾರ್ಯಗಳ ಕುರಿತು ಮಾತು-ಕತೆ ನಡೆಯಲಿದೆ.

ಧಾರ್ಮಿಕ ಕೇಂದ್ರವಾದ ಧರ್ಮಸ್ಥಳವು ಸಾಮಾಜಿಕವಾಗಿ ತಂದಿರುವ ಬದಲಾವಣೆಗಳು, ಇದಕ್ಕಾಗಿ ರೂಪುಗೊಂಡಿರುವ ಯೋಜನೆಗಳು, ಗ್ರಾಮೀಣ ಜನರ ಬದುಕಿನ ಶೈಲಿಯನ್ನೇ ಬದಲಾಯಿಸಲ